ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 117-120
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸಮಾನತೆಯ ಹರಿಕಾರ ಆಧುನಿಕ ಭಾರತದ ನಿರ್ಮಾತೃ ಡಾ. ಬಿ.ಆರ್.ಅಂಬೇಡ್ಕರ್

**ಡೀನಾ ಪಿ.ಪಿ.**
ಉಪನ್ಯಾಸಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ.

***Abstract:***

*"I like the religion that teaches liberty, equality and fraternity" ಎಂಬ ಅರ್ಥಪೂರ್ಣ ಮಾತನ್ನು ಹೇಳಿದ ಭಾರತದ ಸಂವಿಧಾನ ಶಿಲ್ಪಿ, ಸಮಾನತೆಯ ಹರಿಕಾರ ದಲಿತರ ಆಶಾ ಜ್ಯೋತಿ, ಮಾನವೀಯ ಮೌಲ್ಯಗಳಿಗಾಗಿ ಅಹರ್ನಿಶಿ ದುಡಿದ ಪುರುಷಸಿಂಹ ಭಾರತಮಾತೆಯ ಹೆಮ್ಮೆಯ ಪುತ್ರ ಭಾರತ ರತ್ನ ಡಾ.ಭೀಮರಾವ್ ರಾಮ್‌ಜಿ ಅಂಬೇಡ್ಕರ್. ಇವರು ಭಾರತ ಕಂಡ ಅತಿಶ್ರೇಷ್ಠ ನಾಯಕ. 'ಮೂರು ಸಾಗರ, ನೂರು ಮಂದಿರ, ದೈವ ಸಾವಿರ ಇದ್ದರೆ, ಗಂಗೆ ಇದ್ದರೆ, ಸಿಂಧು ಇದ್ದರೆ ಗಿರಿಹಿಮಾಲಯವಿದ್ದರೆ ವೇದವಿದ್ದರೆ ಭೂಮಿ ಇದ್ದರೆ ಘನಪರಂಪರೆ ಇದ್ದರೆ ಏನು ಸಾರ್ಥಕ ಮನೆಯ ಮಕ್ಕಳೇ ಮಲಗಿ ನಿದ್ರಿಸುತ್ತಿದ್ದರೆ' ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಸಹಸ್ರಾರು ವರ್ಷಗಳಿಂದ ದಬ್ಬಾಳಿಕೆ ಶೋಷಣೆಗೆ ಒಳಗಾದ ದಲಿತ ಸಮಾಜವನ್ನು ಮೇಲೆತ್ತುವ ಪ್ರಯತ್ನವನ್ನು ಯಾರೂ ಮಾಡದೇ ಇದ್ದಂತಹ ಸಮಾಜದ ನಡುವೆ ಜಾತಿ ಎಂಬ ಎರಡಕ್ಷರದ ಕಾರಣವನ್ನು ನೀಡಿ ದುರ್ಬಲರನ್ನು ಶೋಷಿಸುತ್ತಿದ್ದ ಸಮಾಜವನ್ನು ಎದುರಿಸುವಲ್ಲಿ ಏಕ ಚಿತ್ತರಾಗಿ ದೃಢಮನಸ್ಸಿನಿಂದ ಕಾರ್ಯೋನ್ಮುಖರಾದ ಮಹಾನ್ ಚೇತನ ಬಾಬಾ ಸಾಹೇಬ ಅಂಬೇಡ್ಕರ್‌ರವರು.*

**Keywords:** *ಅಂಬೇಡ್ಕರ್, ಸಮಾನತೆ, ಶೋಷಣೆ, ಆಧುನಿಕ ಭಾರತದ ನಿರ್ಮಾತೃ.*

## ಪೀಠಿಕೆ

ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮಾರ್ಗೋಪಾಯದೊಂದಿಗೆ ಸಮಾಜದ ಎಲ್ಲಾ ಸಮಸ್ಯೆಗಳಿಗೂ ಶಿಕ್ಷಣವೇ ಸಂಜೀವಿನಿ ಎಂಬುದನ್ನು ತಮ್ಮ ದೂರ ದೃಷ್ಟಿಯಿಂದ ಅರಿತಿದ್ದ ಅಂಬೇಡ್ಕರ್‌ರವರು ಯಾವ ಜನಾಂಗವೇ ಆಗಲಿ ಮುಂದುವರಿಯಲು 'ಶಿಕ್ಷಣ ಎಂಬುದು ಹುಲಿಯ ಹಾಲಿದ್ದಂತೆ ಅದನ್ನು ಕುಡಿದವರು ಘರ್ಜಿಸಲೇಬೇಕು' ಎಂಬ ವಾಸ್ತವಾಂಶದ ಅರಿವನ್ನು ನೀಡುವ ಮೂಲಕ ಅಸ್ಪೃಶ್ಯತೆ ಹುಟ್ಟಿ ಬೆಳೆದಿದ್ದ ಜಾತಿಹೀನನ ಮನೆಯಲ್ಲಿ ಜ್ಯೋತಿಯಾಗಿದ್ದ ಅಂಬೇಡ್ಕರ್ ಶೋಷಿತರಿಗೆ ಶಿಕ್ಷಣದ ಸೌಲಭ್ಯವನ್ನು ಒದಗಿಸುವಲ್ಲಿ ಅಪಾರವಾಗಿ ಶ್ರಮಿಸಿದರು.

### ಅದ್ವಿತೀಯ ನಾಯಕರಾಗಿ ಡಾ. ಬಿ. ಆರ್. ಅಂಬೇಡ್ಕರ್

ಬ್ರಿಟಿಷರ ಆಡಳಿತದ ವಿರುದ್ಧ ದೇಶದ ಉದ್ದಗಲಕ್ಕೂ ಅಸಂತುಷ್ಟಿ, ಆಕ್ರೋಶ ಭುಗಿಲೆದ್ದ ಸಂದರ್ಭ ಈ ಕಾವನ್ನು ದಮನಗೊಳಿಸುವ ಉದ್ದೇಶದಿಂದ ಬ್ರಿಟಿಷ್ ಸರ್ಕಾರ ಸೈಮನ್ ಆಯೋಗವನ್ನು ನೇಮಿಸಿತು. ಆದರೆ ಕಾಂಗ್ರೆಸ್ ಅದನ್ನು ಬಹಿಷ್ಕರಿಸಿ ಸಂವಿಧಾನವನ್ನು ರೂಪಿಸಲು ಮೋತಿಲಾಲ್ ನೆಹರು ಅಧ್ಯಕ್ಷತೆಯಲ್ಲಿ ಒಂದು

***Please cite this article as:*** ಡೀನಾ ಪಿ.ಪಿ. (2024). ಸಮಾನತೆಯ ಹರಿಕಾರ ಆಧುನಿಕ ಭಾರತದ ನಿರ್ಮಾತೃ ಡಾ. ಬಿ.ಆರ್.ಅಂಬೇಡ್ಕರ್. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 117–120.

ಸಮಿತಿಯನ್ನು ಅದು ರಚಿಸಿತು. ಅದು ರಚಿಸಿದ ಸಂವಿಧಾನದಲ್ಲಿ ದಲಿತ ವರ್ಗಗಳಿಗೆ ಪ್ರಾತಿನಿಧ್ಯ ಕೊಡುವ ಯಾವ ಉಪಬಂಧವನ್ನು ಕಲ್ಪಿಸಿರಲಿಲ್ಲ. ಅಷ್ಟೇ ಅಲ್ಲ ಸಂವಿಧಾನ ರಚನಾ ಪೂರ್ವದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕಾಗಿ ಮುಸ್ಲಿಂ, ಪಾರ್ಸಿ, ಕ್ರೈಸ್ತ, ಸಿಖ್, ಆಂಗ್ಲೋ ಇಂಡಿಯನ್ ಮತ್ತು ಬ್ರಾಹ್ಮಣೋತ್ತರ ಸಂಘ ಸಂಸ್ಥೆಗಳನ್ನು ಕಾಂಗ್ರೆಸ್ ಆಹ್ವಾನಿಸಿತು. ಆದರೆ ದಲಿತ ಸಂಸ್ಥೆಗಳನ್ನು ಆಹ್ವಾನಿಸಲಿಲ್ಲ. ಇದರಿಂದ ಅಂಬೇಡ್ಕರ್‌ರವರಿಗೆ ತೀವ್ರ ಅಸಮಾಧಾನವಾಯಿತು ಅಂಬೇಡ್ಕರ್ ಅವರು ಸೈಮನ್ ಆಯೋಗದೊಂದಿಗೆ ಸಂಪೂರ್ಣ ಸಹಕಾರ ನೀಡಿದರು. ಸೈಮನ್ ಆಯೋಗದೊಡನೆ ಸಹಕರಿಸಿದ್ದರಿಂದ ಕೆಲವರು ಅಂಬೇಡ್ಕರನ್ನು ದೇಶದ್ರೋಹಿ ಎಂದು ಬ್ರಿಟಿಷರ ಬಾಲ ಬಡುಕನೆಂದು ಕರೆದರು. ತಮ್ಮ ಗುರಿ ಮತ್ತು ಉದ್ದೇಶ ಸ್ಪಷ್ಟ ಮತ್ತು ಪ್ರಾಮಾಣಿಕವಾಗಿದ್ದರಿಂದ ಅವರು ಈ ಬೇಜವಾಬ್ದಾರಿ ಆರೋಪಗಳಿಂದ ಧೃತಿಗೆಡಲಿಲ್ಲ ದಲಿತ ವರ್ಗದವರ ಹಿತರಕ್ಷಣೆಗಾಗಿ ಹಲವು ಅಂಶಗಳನ್ನು ಆಯೋಗದ ಮುಂದಿರಿಸಿದರು.

ದಲಿತರನ್ನು ಹಿಂದೂ ಸಮಾಜದಿಂದ ಪ್ರತ್ಯೇಕವಾದ ವಿಶಿಷ್ಟ ಅಲ್ಪಸಂಖ್ಯಾತ ಜನಾಂಗವೆಂದು ಪರಿಗಣಿಸಬೇಕು. ದಲಿತರು ಶೈಕ್ಷಣಿಕವಾಗಿ ಹಿಂದುಳಿದವರು, ಆರ್ಥಿಕವಾಗಿ ಕಡುಬಡವರು ಸಾಮಾಜಿಕವಾಗಿ ದಾಸ್ಯಕ್ಕೊಳಗಾದವರು ಆದ್ದರಿಂದ ಅವರಿಗೆ ಹೆಚ್ಚಿನ ರಾಜಕೀಯ ರಕ್ಷಣೆ ಬೇಕು. ಅವರಿಗಾಗಿ ಚುನಾವಣೆಗಳಲ್ಲಿ ಸ್ಥಾನಗಳನ್ನು ಕಾಯ್ದಿರಿಸಬೇಕು. ಅಥವಾ ಪ್ರತ್ಯೇಕ ಚುನಾಯಿತ ಸಮುದಾಯವನ್ನು ಸೃಜಿಸಬೇಕು ತಮ್ಮ ಸಂಖ್ಯೆಗನುಗುಣವಾಗಿ ತಮಗೆ ಪ್ರಾತಿನಿಧ್ಯಬೇಕು ಎಂದು ವಾದಿಸುವ ಮೂಲಕ ಸಮಾಜದ ಧ್ವನಿಯಾಗಿ ಡಾ. ಬಿ.ಆರ್. ಅಂಬೇಡ್ಕರ್ ನಿಂತರು.

ಭೂ ರಹಿತರಿಗೆ ಭೂಮಿಯನ್ನು ಕೊಡಿಸುವುದಕ್ಕಾಗಿ, ಕಾರ್ಮಿಕರಿಗೆ ಹೆಚ್ಚು ಸೌಲಭ್ಯವನ್ನು ದೊರಕಿಸುವುದಕ್ಕಾಗಿ ಬಿಡುವಿಲ್ಲದೆ ಶ್ರಮಿಸಿದರು. ದೈಹಿಕ ಆಯಾಸ ಮಾನಸಿಕ ಶ್ರಮ ಯಾವುದನ್ನೂ ಲೆಕ್ಕಿಸಲಿಲ್ಲ. ಹಳ್ಳಿ ಹಳ್ಳಿಗಳನ್ನು ಸುತ್ತುವ ಮೂಲಕ ದಲಿತ ವಿದ್ಯಾರ್ಥಿಗಳಿಗೆ ಶಾಲೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು.

ಸಭೆಗಳಲ್ಲಿ ಶೋಷಿತರ ಪರವಾಗಿ ಅಂಬೇಡ್ಕರ್ ಅವರು ಮಾಡುವ ಪರಿಣಾಮಕಾರಿ ಸಿಂಹನುಡಿಯ, ಭಾಷಣಗಳು ಎದುರು ನಿಂತವನ ಎದೆ ನಡಗಿಸುವಂತಿರುತ್ತಿತ್ತು ಸಾರ್ವಭೌಮ ಸರ್ಕಾರದ ಮುಂದೆ ಅಸ್ಪೃಶ್ಯರ ಬೇಡಿಕೆಗಳನ್ನು ಮುಂದಿಡಲು ಪ್ರಥಮ ಅವಕಾಶ ಸಿಕ್ಕಿದ ಸಂದರ್ಭಗಳಲ್ಲಿ ಅಂಬೇಡ್ಕರ್ ಅವರು *"ಭಾರತದಲ್ಲಿ ಗುಲಾಮರಿಗಿಂತ ನಿಕೃಷ್ಟ ಬಾಳ್ವೆಯನ್ನು ಮಾಡುತ್ತಿರುವ ದಲಿತ ಜನಾಂಗದ ಪರವಾಗಿ ನಾನು ಮಾತನಾಡುತ್ತಿದ್ದೇನೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ಇಪ್ಪತ್ತು ಜನ ದಲಿತರು. ಈ ಸಂಖ್ಯೆ ಇಡೀ ಇಂಗ್ಲೆಂಡ್ ಅಥವಾ ಫ್ರಾನ್ಸಿನ ಜನಸಂಖ್ಯೆಗಿಂತ ದೊಡ್ಡದು. ಇವರೆಲ್ಲರ ಪರವಾಗಿ ನಾನು ಹೇಳುತ್ತೇನೆ. ಈಗಿರುವ ಸರ್ಕಾರ ಬದಲಾಗಿ ಜನತಾ ಸರ್ಕಾರ ಸ್ಥಾಪಿತವಾಗಬೇಕು. ಸಾವಿರಾರು ವರ್ಷಗಳಿಂದ ನಾವು ದಬ್ಬಾಳಿಕೆಗೆ ಗುರಿಯಾಗಿದ್ದೇವೆ ನಮ್ಮ ಅಧಃಪತನವಾಗಿದೆ. ಬ್ರಿಟಿಷ್ ಸರ್ಕಾರ ನೂರಾರು ವರ್ಷಗಳ ಕಾಲ ಆಡಳಿತ ನಡೆಸಿದರೂ ನಮ್ಮ ಉನ್ನತಿಗಾಗಿ ಏನು ಮಾಡಲಿಲ್ಲ, ನಮ್ಮ ಸ್ಥಿತಿ ಸುಧಾರಿಸಲಿಲ್ಲ. ಬ್ರಿಟಿಷರು ಬರುವುದಕ್ಕಿಂತ ಮುಂಚೆ ನಮಗೆ ದೇವಾಲಯಗಳಿಗೆ ಪ್ರವೇಶವಿರಲಿಲ್ಲ. ಸಾರ್ವಜನಿಕ ಜಲಾಶಯಗಳ ನೀರನ್ನು ಬಳಸುವಂತಿರಲಿಲ್ಲ. ಸೈನ್ಯಕ್ಕೆ ಸೇರಲು ಹಕ್ಕಿರಲಿಲ್ಲ. ನಮಗೆ ಬೇಕಾದ ವಿದ್ಯೆಯನ್ನು ಕಲಿಯಲು, ಇಷ್ಟವಿರುವ ವೃತ್ತಿಯನ್ನು ಕೈಗೊಳ್ಳಲು ಸ್ವಾತಂತ್ರ್ಯವಿರಲಿಲ್ಲ. ಬ್ರಿಟಿಷರು ಬಂದಮೇಲೆ ಈ ಸಮಸ್ಯೆಯನ್ನು ಪರಿಹರಿಸಿದರೆ? ಇಲ್ಲ... ಇಲ್ಲ, ಬ್ರಿಟೀಷರಿಗೆ ತಮ್ಮ ಉಳಿವಿನ ಸಮಸ್ಯೆ ಮಹತ್ವದಾಗಿತ್ತೇ ಹೊರತು ಭಾರತದ ಪ್ರಜೆಗಳ ದೈನಂದಿನ ಸಮಸ್ಯೆ ಮಹತ್ವದೆನಿಸಿರಲಿಲ್ಲ".*

ನಮ್ಮ ಆರ್ಥಿಕ ರಾಜಕೀಯ ಸ್ಥಾನಮಾನಗಳು ಉತ್ತಮಗೊಂಡಿಲ್ಲ. ಉತ್ತಮಗೊಳಿಸುವ ಯಾವ ಪ್ರಯತ್ನವನ್ನು ಸರ್ಕಾರ ಮಾಡಿಲ್ಲ. ಆದ್ದರಿಂದ ಇಂತಹ ಸರ್ಕಾರದಿಂದ ನಮಗೆ ಕಿಂಚಿತ್ತೂ ಪ್ರಯೋಜನವಿಲ್ಲ ನಮ್ಮ ಹಿತ ರಕ್ಷಿಸುವ ನಮ್ಮೆಲ್ಲರ ನೋವನ್ನು ತನ್ನದೇ ನೋವೆಂದು ಅನುಭವಿಸುವ ನಮ್ಮದೇ ಆದ ಸರ್ಕಾರ ನಮಗೆ ಬೇಕು ಎಂದು ನೇರ ನುಡಿಗಳ ಮೂಲಕ ತಮ್ಮ ವಾಕ್ ಪ್ರವಾಹದ ಮೂಲಕ ಬ್ರಿಟಿಷ್ ಪ್ರತಿನಿಧಿಗಳನ್ನು ತಲ್ಲಣಗೊಳಿಸಿದರು. ದಲಿತ ನಾಯಕನ ಈ ನಿರ್ಭಯ ಅಭಿಪ್ರಾಯ ಮಂಡನೆ ಮುಂದೆ ಅನೇಕ ಶೋಷಿತರು ಈ ಸಮಾಜದಲ್ಲಿ ಮೇಲುಸ್ತರದ ಜೀವನ ನಡೆಸಲು ದಾರಿ ಮಾಡಿ ಕೊಟ್ಟಿತು.

**ಅಂಬೇಡ್ಕರ್‌ರವರ ಜೀವಮಾನ ಸಾಧನೆಗಳು**

ವಿಪರ್ಯಾಸವೆಂದರೆ, ನಾವುಗಳು ಇಂದು ಡಾ. ಬಿ.ಆರ್. ಅಂಬೇಡ್ಕರ್ ಎಂಬ ಹೆಸರನ್ನು ಕೇಳಿದ ಕೂಡಲೇ ಅವರನ್ನು ಸ್ಮರಿಸುವಾಗ "ಅವರೊಬ್ಬ ಮೀಸಲಾತಿಯ ಹರಿಕಾರ" ಸಂವಿಧಾನದ ಶಿಲ್ಪಿ ಎಂದು ಕೈ ತೊಳೆದುಕೊಂಡುಬಿಡುತ್ತೇವೆ. ಕಾರಣ, ಅವರು ಯಾವ ಹಿನ್ನೆಲೆಯಿಂದ ಬಂದಿದ್ದಾರೆ? ದೇಶಕ್ಕಾಗಿ ಅವರು ನೀಡಿದ ಕೊಡುಗೆಗಳೇನು? ಮಾಡಿದ ಮಹಾನ್ ಕಾರ್ಯಗಳೇನು? ಎಂಬುದನ್ನು ಅರಿತುಕೊಳ್ಳದಷ್ಟೂ ಮೂರ್ಖತನದ ಪರಮಾವಧಿಯಲ್ಲಿ ಸಿಲುಕಿಕೊಂಡಿದ್ದೇವೆ.

ಇವರು ಸಾಧಿಸಿದ ಮಹಾನ್ ಕಾರ್ಯಗಳನ್ನು ಅಧ್ಯಯನ ಮಾಡುತ್ತಾ ಹೋದರೆ ನಮಗೆ ಒಬ್ಬ ವ್ಯಕ್ತಿಯಿಂದ ಇಷ್ಟೆಲ್ಲಾ ಸಾಧ್ಯವೇ ಅನಿಸಿಬಿಡುತ್ತದೆ. ಅಂಬೇಡ್ಕರ್‌ರವರು ಬರೆದಿರುವ *"The Problem of Rupee: Its origin and its solution*" ಪುಸ್ತಕವನ್ನು ಆಧಾರವಾಗಿಟ್ಟುಕೊಂಡು ರಾಯಲ್ ಕಮಿಷನ್ ಅಥವಾ ಹಿಲ್ಟನ್‌ಯಂಗ್ ಕಮೀಷನ್ ಭಾರತದಲ್ಲಿ RBI ಸ್ಥಾಪಿಸಲು ಶಿಫಾರಸ್ಸು ನೀಡಿತು. ಎರಡನೇ ಮಹಾಯುದ್ಧದ ನಂತರ ಆರ್ಥಿಕ ಯೋಜನೆಗಳಿಗಾಗಿ RCC (Reconstruction committee of council) ಸ್ಥಾಪಿಸಿ ಕೃಷಿ, ಕೈಗಾರಿಕೆ, ಮತ್ತು ರಕ್ಷಣೆಗೆ ಹೆಚ್ಚು ಒತ್ತು ನೀಡಿದರು. ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರ ಮತ್ತೊಂದು ಕೃತಿ *"The Evolution of Provincial Finance in British India"* ಪುಸ್ತಕವನ್ನು ರಚಿಸಿದ್ದರು. ಇದರ ಆಧಾರದ ಮೇಲೆ ಭಾರತದ 13 ಹಣಕಾಸು ಆಯೋಗಗಳು ಕೆಲಸ ನಿರ್ವಹಿಸಿವೆ. ಇದಲ್ಲದೆ ಮಾನವಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ಬಗ್ಗೆ ಅಪಾರವಾದ ಜ್ಞಾನವನ್ನು ಹೊಂದಿದ್ದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ "ವಿಶ್ವದ ನಿರ್ಮಾತೃಗಳು" ಎಂಬ ಶೀರ್ಷಿಕೆಯಡಿಯಲ್ಲಿ ಜಾಗತಿಕ ಸಮೀಕ್ಷೆಯನ್ನು ಮಾಡಿ 100 ಮಹಾನ್ ವ್ಯಕ್ತಿಗಳ ಪಟ್ಟಿ ಮಾಡಿತು. ಅದರಲ್ಲಿ 4ನೇ ಹೆಸರು ಅಂಬೇಡ್ಕರ್‌ರದ್ದು. ಜಗತ್ತಿನ ಅತ್ಯಂತ ಬೃಹತ್ ಖಾಸಗಿ ಗ್ರಂಥಾಲಯ ಹೊಂದಿರುವ ದಾಖಲೆ ಅಂಬೇಡ್ಕರ್‌ರವರ ಹೆಸರಿನಲ್ಲಿದೆ. ಮುಂಬಯಿಯ ರಾಜಗೃಹದಲ್ಲಿರುವ ಈ ಗ್ರಂಥಾಲಯದಲ್ಲಿ 5000ಕ್ಕಿಂತಲೂ ಹೆಚ್ಚು ಪುಸ್ತಕಗಳು ಇವೆ.

2016ರಲ್ಲಿ ವಿಶ್ವಸಂಸ್ಥೆ ಅಂಬೇಡ್ಕರ್‌ರವರ ಜನ್ಮದಿನವನ್ನು ಅವರು ಕೊಟ್ಟಿರುವ ಕೊಡುಗೆಯ ಆಧಾರದ ಮೇಲೆ ***"ವಿಶ್ವಜ್ಞಾನ ದಿನ"*** ಎಂದು ಆಚರಿಸಲು ಪ್ರಾರಂಭಿಸಿದೆ. ಅಂಬೇಡ್ಕರ್‌ರವರು ಬರೆದಿರುವ *Buddha and his Dhamma* ಕೃತಿಯು ಭಾರತೀಯ ಬೌದ್ಧರ ಧರ್ಮಗ್ರಂಥವಾಗಿದೆ. ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ನೀಡಿದ "Doctor of all science" ಪದವಿ ಪಡೆದ ಜಗತ್ತಿನ ಮೊದಲ ಮತ್ತು ಏಕೈಕ ವ್ಯಕ್ತಿ ಅಂಬೇಡ್ಕರ್ ಇಲ್ಲಿಯವರೆಗೂ ಬಹಳಷ್ಟು ವಿದ್ಯಾರ್ಥಿಗಳು ಈ ಪದವಿ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅದು ಸಾಧ್ಯವಾಗಿಲ್ಲ. ಅಂಬೇಡ್ಕರ್ ಈ ಪದವಿ ಪಡೆಯಲು 8 ವರ್ಷಗಳ ಅಧ್ಯಯನವನ್ನು ಕೇವಲ 2 ವರ್ಷ 3

ತಿಂಗಳಿನಲ್ಲಿ ಮುಗಿಸಿದ್ದರು. ಜಗತ್ತಿನ ಎಲ್ಲಾ ಧರ್ಮಗಳ ತುಲನಾತ್ಮಕ ಅಧ್ಯಯನ ಮಾಡಿದ್ದರು. 64 ವಿಷಯಗಳಲ್ಲಿ ಪರಿಣತಿ ಹಾಗೂ 9 ಭಾಷೆಗಳಲ್ಲಿ ಪ್ರಭುತ್ವವಿತ್ತು.

**"**ಮನುಷ್ಯನಾಗಿ ಹುಟ್ಟಿದ ಬಳಿಕ ನಿನ್ನ ಹಿಂದೆ ಅಳಿಸಲಾಗದ ಒಳ್ಳೆಯ ಗುರುತುಗಳನ್ನು ಬಿಟ್ಟು ಇಲ್ಲಿಂದ ನಿರ್ಗಮಿಸು**"** ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ, ಸ್ವಾರ್ಥರಹಿತ ಬದುಕನ್ನು ನಡೆಸಿದಂತಹ ಜ್ಞಾನಪಿಪಾಸುವಾದಂತಹ ಅಂಬೇಡ್ಕರ್‌ವರದ್ದು ಮೇರು ವ್ಯಕ್ತಿತ್ವ ಈ ಮಹಾನ್ ಚೇತನ ಆಧುನಿಕ ಭಾರತದ ಅಭಿವೃದ್ಧಿಗೆ ನೀಡಿರುವ ಕೊಡುಗೆಗಳು ಅಜರಾಮರ. ಆದುದರಿಂದಲೇ ಇವರನ್ನು 'ಆಧುನಿಕ ಭಾರತದ ನಿರ್ಮಾತೃ' ಎಂದು ಕರೆಯುತ್ತಾರೆ.

**ಪರಾಮರ್ಶನ ಗ್ರಂಥಗಳು**


- *ಡಾ.ಬಾಬಾ ಸಾಹೇಬ್‌ರವರ ಸಮಗ್ರ ಬರೆಹಗಳು ಮತ್ತು ಭಾಷಣಗಳು.* (2015). ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಕೃಷ್ಣಮೂರ್ತಿ ಸಿ.ಎನ್. (2016). *ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಡಾ. ರಾಮಮನೋಹರ ಲೋಹಿಯಾ.* ಇಂದಿರಾ ಪ್ರಕಾಶನ.
- ಲಕ್ಕಪ್ಪ ಗೌಡ ಎಲ್ ಜೆ. (2020). *ದಲಿತ ಸೂರ್ಯ.* ತನುಮನ ಪ್ರಕಾಶನ.
- ಲಕ್ಕಪ್ಪ ಗೌಡ ಎಲ್ ಜೆ. (2003). *ದಲಿತ ಸೂರ್ಯ: ಡಾ. ಅಂಬೇಡ್ಕರ್ ಜೀವನ ಚಿತ್ರ.* ತನುಮನ ಪ್ರಕಾಶನ.
- Jaffrelot, C. (2005). *Dr. Ambedkar and Untouchability: Fighting the Indian Caste System*. http://ci.nii.ac.jp/ncid/BA86933609
- Kumar, R. (1985). Gandhi, Ambedkar and the Poona pact, 1932. *South Asia:Journal of South Asian Studies, 8*(1–2), 87–101. https://doi.org/10.1080/00856408508723068
- Zelliot, E. (1996). *From Untouchable to Dalit: Essays on the Ambedkar movement*. http://ci.nii.ac.jp/ncid/BB01201676